ಓಎಸ್ ನಂ.1-23

ಡಿ.ಡಬ್ಲ್ಯೂ-2

ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಪಿ ಬಿ ವಕೀಲರಿಂದಃ**

1. ನ್ಯಾಯಾಲಯದ ಮುಂದೆ ನಿಂತಿರುವ ಫ್ರಾಸಾ -2 ಸಂತೋಷ ನನ್ನ ದಾಯಾದಿ . ಅವರ ಅಪ್ಪ ರಾಮಚಂದ್ರ ಆಗಿದ್ದರು ಎಂದರೆ ಸರಿ . ಇಂಗ್ಲೀಷ ಕ್ಯಾಂಲೆಂಡರ ಪ್ರಕಾರ ನನ್ನ ಹುಟ್ಟಿದ ದಿನಾಂಕ ಎಷ್ಟು ಎಂದು ನನಗೆ ನೆನಪಿಲ್ಲ. ನನ್ನ ತಂದೆ ಕೃಷ್ಣ ನನ್ನು ನಾನು ನೋಡಿರುತೇನೆ .ನನ್ನ ತಂದೆ ಕೃಷ್ಣ ಸಂತೋಷನ ತಂದೆ ರಾಮಚಂದ್ರ ,ಮತ್ತು ವಾಸುದೇವ ಎಂಬುವವರು ಇವರು ಮೂರು ಜನ ಅಣ್ಣತಮ್ಮದಿರು ಆಗಿದ್ದರು ಎಂದರೆ ಸರಿ . ಸಾಕ್ಷಿ ಯು ಪುನಃ ಮುಂದುವರೆದು ಅವರು 6 ಜನ ಮಕ್ಕಳು ಅದರಲ್ಲಿ 5 ಜನ ಅಣ್ಣತಮ್ಮಂದಿರು ಮತ್ತು ಒಬ್ಬ ಸಹೋದರಿ ಇರುತ್ತಾರೆ . ಸದ್ರಿ 6 ಜನ ಯಾರು ಎಂದರೆ ಕೃಷ್ಣ , ರಾಮಚಂದ್ರ , ವಾಸುದೇವ , ಲುನಾ , ಸಣ್ಣತಮ್ಮ ಹಾಗೂ ದುಮ್ಮಿ , ಆಗಿದ್ದರು . ಲೂನಾ ಮತ್ತು ಸಣ್ಣತಮ್ಮನಿಗೆ ವಾರಸುದಾರರು ಯಾರು ಇಲ್ಲ . ನನ್ನ ತಂದೆ ಕೃಷ್ಣ ಹಾಗೂ ವಾಸುದೇವ ಪುರಷೋತ್ತಮ ನ ಅಪ್ಪನ ಹೆಸರು ಅಜ್ಜಣ್ಣ .

2. ಅಜ್ಜಣ್ಣ ಖೇಮು ನಾಯ್ಕು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಅಜ್ಜಣ್ಣ ಮೃತ ಪಟ್ಟ ನಂತರ ಅವರ ಹೆಸರಿನಲ್ಲಿರುವ ಆಸ್ತಿ ಯಾರ ಹೆಸರಿಗೆ ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ.ಅಜ್ಜಣ್ಣ ನಾಯ್ಕು ಸಾಯುವಾಗ ಆತನ ಹೆಸರಿಗೆ ಆಸ್ತಿ ಇತ್ತೊ ಇಲ್ಲವೊ ಎಂದು ಅದರ ಬಗ್ಗೆ ನನಗೆ ಗೊತ್ತಿಲ್ಲ . ದಾವೆ ಯಾದ ಮೇಲೆ ಆ ಬಗ್ಗೆ ಮಾಹಿತಿ ಪಡೆದು ಕೊಂಡಿರುತ್ತೇನೆ . ಅಜ್ಜಣ್ಣ ಖೇಮು ನಾಯ್ಕು ಸಾಯುವಾಗ ಅವರ ಮನೆಯಲ್ಲಿ ಹಿರಿಯ ರು ಇದ್ದರು ಎಂದರೆ ಪುರುಷೊತ್ತಮ ಹಿರಿಯರು ಆಗಿದ್ದರು .ಅಜ್ಜಣ್ಣ ಖೇಮು ನಾಯ್ಕು ನ ಜೀವಿತ ಕಾಲದಲ್ಲಿ ಅವರ ಕುಟುಂಬದಲ್ಲಿ ವಾಂಟಣಿ ಆಗಿದ್ದು ಇರುತ್ತದೆಯಾ ಎಂದರೆ ನನಗೆ ಮಾಹಿತಿ ಇಲ್ಲ. ಅಜ್ಜಣ್ಣ ಖೇಮು ನಾಯ್ಕು ಸತ್ತ ಮೇಲೆ ಅವರ 5 ಜನ ಮಕ್ಕಳಲ್ಲಿ ಪಾಲು ಆದ ಬಗ್ಗೆ ಕಾಗದ ಪತ್ರ ಯಾವುದು ಇರುವುದಿಲ್ಲ . ಹಿರಿಯ ಮಗ ಪುರುಷೊತ್ತಮ ತೀರಿ ಕೊಂಡ ಮೇಲೆ ಉಳಿದ 4 ಜನ ಸಹೋದರಲ್ಲಿ ಪಾಲು ವಿಭಾಗ ಆದದ್ದು ಇರುತ್ತದೆಯಾ ಎಂದರೆ ಇಲ್ಲ . ಅಜ್ಜಣ್ಣ ಖೇಮು ನಾಯ್ಕು ಇರುವಾಗ 5 ಜನ ಮಕ್ಕಳಲ್ಲಿ

ಪುರಷೊತ್ತಮ ಹಿರಿಯವನು 4 ಜನ ಸಹೋದರರು ಅವರ ನಂತರದ ಸಹೋದರರು ಆಗಿರುತ್ತಾರೆ ಪುರುಷೊತ್ತಮ ತೀರಿ ಕೊಂಡ ಮೇಲೆ ನನ್ನ ತಂದೆ ಕೃಷ್ಣ ಹಿರಿಯವನಾದನು . ಆ ಕೃಷ್ಣ ನ ಮಗನೆ ನಾನು ಕೃಷ್ಣ ಜೀವಂತ ಇರುವಾಗ ಪುರುಷೂತ್ತಮನಿಗೆ ಮಕ್ಕಳು ಇದ್ದರು .ಪುರಷೊತ್ತಮನ ಮಕ್ಕಳು ಕೃಷ್ಣ , ವಾಸುದೇವ ಸಣ್ಣತಮ್ಮ ಮತ್ತು ಲೂನಾ ರವರ ಮಧ್ಯ ದಲ್ಲಿ ಪಾಲು ಆದದ್ದು ಇಲ್ಲ . ಕೃಷ್ಣ ಜೀವಂತ ಇರುವಾಗ ಅವರ ಸಹೋದರರರ ಮದ್ಯೆ ಪಾಲು ಇರುತ್ತದೆಯಾ ಎಂದರೆ ಇಲ್ಲ .

3. ಕೃಷ್ಣ ಸತ್ತು ಹೋದ ಮೇಲೆ ಅಜ್ಜಣ್ಣ ನಿಂದ ಬಂದ ಆಸ್ತಿ ಯಾರ ಹೆಸರಿಗೆ ದಾಖಲಾಯಿತು ಎಂದರೆ ಅಜ್ಜಣ್ಣ ನಿಂದ ಬಂದ ಬಗ್ಗೆ ನನಗೆ ಗೊತ್ತಿಲ್ಲ ಅಜ್ಜಣ್ಣನಿಂದ ಯಾವುದು ಆಸ್ತಿ ಬಂದಿಲ್ಲ . ಅಜ್ಜಣ್ಣ ಖೇಮು ನಾಯ್ಕ 1941 ರಲ್ಲಿ ತೀರಿ ಕೊಂಡ ಆತನು ತೀರಿ ಕೊಂಡ ನಂತರ ಕುಟುಂಬದ ಆಸ್ತಿ ಎಲ್ಲಾ ಅವಿಭಕ್ತ ಕುಟುಬಂದ ಮಾನ್ಯೇಜರ ನಾತೆಯಿಂದ ಪುರುಷೂತ್ತಮನ ಹೆಸರಿಗೆ ಎಲ್ಲಾ ಆಸ್ತಿಗಳು ಆಗಿರುತ್ತದೆ ಎಂದರೆ ಪುರುಷೂತ್ತಮನ ಹೆಸರಿಗೆ ಆದದ್ದು ನನಗೆ ಗೊತ್ತಿಲ್ಲ . ಪುರುಷೊತ್ತಮನ ಹೆಸರಿಗೆ ಆದ ದಾವಾಸ್ತಿಗಳ ದಾಖಲಾತಿಗಳನ್ನು ಇದುವರೆಗೂ ನೀವು ನೋಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ .ಅಜ್ಜಣ್ಣ ತೀರಿ ಕೊಂಡ ಮೇಲೆ ಪುರುಷ್ತೂತ್ತಮ ಸುಮಾರು 4-5 ವರ್ಷಗಳ ಕಾಲ ಜೀವಂತವಾಗಿದ್ದನಾ ಎಂದರೆ ನನಗೆ ಗೊತ್ತಿಲ್ಲ .ಪುರುಷೂತ್ತಮ ತೀರಿ ಕೊಳ್ಳುವಾಗ ಪುರಷೂತ್ತಮನ ಮಕ್ಕಳಾದ ರಾಮಚಂದ್ರ , ಗೋಪು , ಪೀರು ಹಾಗೂ ಸಾತುರವರು ಅಪ್ರಾಪ್ತ ವಯಸ್ಕರು ಅಗಿದ್ದರು ಎಂದರೆ ನನಗೆ ಗೊತ್ತಿಲ್ಲ ನಾನು ಅವರನ್ನು ನೋಡಿಲ್ಲ .ಪುರುಷೊತ್ತಮ ಮೃತ ನಾದ ನಂತರ ಪುರುಷೂತ್ತಮ ನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದರಿಂದ ಆ ಎಲ್ಲಾ ಆಸ್ತಿಗಳು ಅವರ ಚಿಕ್ಕಪ್ಪನಾದ ಎಂದರೆ ನಿಮ್ಮ ತಂದೆಯಾದ ಕೃಷ್ಣ ನ ಹೆಸರಿಗೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿ ಪುನಃ ಮುಂದುವರೆದು ಪುರುಷೊತ್ತಮ ನ ಹೆಸರಿನಿಂದ ಯಾವುದೆ ಆಸ್ತಿಗಳು ಕೃಷ್ಣ ನ ಹೆಸರಿಗೆ ದಾಖಲು ಆಗಿಲ್ಲ .

4. ದಾವಾ ದಲ್ಲಿ ಕಾಣಿಸಿದ ಆಸ್ತಿಗಳು ಗೇಣಿ ಆಸ್ತಿಗಳು ಎಂದರೆ ಅದು ಒಡೆಯನಿಂದ ಬಂದ ಆಸ್ತಿಗಳು ಎಂದರೆ ಸರಿ . 1941 ರಿಂದ 1949 ರ ವರೆಗೆ ಪುರುಷೊತ್ತಮ ನ ಹೆಸರಿಗೆ ಅವಿಬಕ್ತ ಕುಟುಂಬದ ಮಾನ್ಯೆಜರ ನಾತೆಯಿಂದ ದಾವಾಸ್ತಿಗಳು ಆತನ ಹೆಸರಿಗೆ ಇದ್ದವು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ದಾವಾಸ್ತಿಗಳನ್ನು

ನಿಮ್ಮ ತಂದೆ ಸ್ವತಃ ನಾತೆಯಿಂದ ಖರೀದಿ ಮಾಡಿದ್ದು ಇರುತ್ತದೆಯಾ ಎಂದರೆ ಇಲ್ಲ . ಸಾಕ್ಷಿ ಪುನಃ ಮುಂದುವರೆದು ಅದು ಒಡೆಯ ನಿಂದ ಬಂದದ್ದು ಮಾತ್ರ ಅಷ್ಟೇ . ಪುರುಷೊತ್ತಮ ತೀರಿ ಕೊಂಡ ನಂತರ ನಿಮ್ಮ ತಂದೆಯ ಹೆಸರು ದಾವಾಸ್ತಿಗಳಲ್ಲಿ ಬಂದಿತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ . . ನಿಮ್ಮ ತಂದೆ ತೀರಿ ಕೊಂಡ ನಂತರ ನಿಮ್ಮ ತಂದೆ ಹೆಸರಿನಲ್ಲಿರುವ ಆಸ್ತಿಗಳ ದಾಖಲಾತಿಗಳು ನಿಮ್ಮ ತಾಯಿ ಗೆ ಮತ್ತು ನಿಮಗೆ ಬಂದಿತು ಎಂದರೆ ಸರಿ . ನಿಮ್ಮ ಅಜ್ಜ ಇರುವ ಕಾಲಕ್ಕೆ ಯಾವ ಆಸ್ತಿಗಳು ಎಲ್ಲೆಲ್ಲಿ ಇತ್ತು ಎಂದರೆ ಅವು ಸಕಲಬೇಣ ಮತ್ತು ಅವರ್ಸಾ ದಲಿಲ ಇದ್ದವು . ಸಾಕ್ಷಿ ಪುನಃ ಮೊದಲು ಎಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ . ಆದರೆ ಈಗ ಆಸ್ತಿಗಳು ಸಕಲಬೇಣ ಮತ್ತು ಅವರ್ಸಾದಲ್ಲಿ ಇವೆ . ನಮ್ಮ ತಂದೆಯ ಕಾಲಕ್ಕೂ ಸಹ ನಾನು ಹುಟ್ಟಿದಾಗಿನಿಂದ ಸದಿರ ಆಸ್ತಿಗಳು ಸಕಲಬೇಣ ಮತ್ತು ಆವರ್ಸಾದಲ್ಲಿ ಇರುತ್ತವೆ . ಪುರುಷೊತ್ತಮ ಹಾಗೂ ವಾಸುದೇವನ ನ ಮನೆ ಸಕಲಬೇಣ ಮತ್ತು ಅವರ್ಸಾ ದಲ್ಲಿ ಇರುತ್ತದೆ . ನನ್ನ ತಂದೆ ಮನೆ ಅವರ್ಸಾದಲ್ಲಿ ಇರುತ್ತದೆ . ನನ್ನ ತಂದೆ ಮನೆ ಹಾಗೂ ಪುರುಷೊತ್ತಮ ನ ಮನೆ ಹಾಗೂ ವಾಸುದೇವನ ಮನೆ ಎಷ್ಟು ದೂರದಲ್ಲಿ ಇರುತ್ತವೆ ಎಂದರೆ ಒಂದೆ ಬಾಗಾಯತ ದಲ್ಲಿ ಇರುತ್ತದೆ . ಅದು ಸರ್ವೆ ನಂ 46 ಆಗಿರುತ್ತದೆ . ಸರ್ವೆ ನಂ 46 ರಲ್ಲಿ ಈಗ 7–8 ಮನೆಗಳು ಆಗಿರುತ್ತದೆ . ನನ್ನ ತಂದೆಗೆ ನಾನು ಒಬ್ಬನೆ ಮಗ ನಾನು ಒಂದುಮನೆ ಕಟ್ಟಿಕೊಂಡಿರುತೇನೆ ಎಂದರೆ ಸರಿ .

5. ಪುರುಷೊತ್ತಮನಿಗೆ 4 ಜನ ಮಕ್ಕಳು ಇದ್ದು ಅವರೆಲ್ಲರೂ ಸಹ ಒಂದೆ ಮನೆ ಯಲ್ಲಿ ವಾಸ ವಾಗಿರುತ್ತಾರೆ . ವಾಸುದೇವನ ಮಕ್ಕಳು 2–3 ಮನೆ ಕಟ್ಟಿಕೊಂಡಿರುತ್ತಾರೆ . ಸರ್ವೆ ನಂಬರ 46 ನನ್ನ ತಂದೆಯ ಹೆಸರಿನಲ್ಲಿ ಇತ್ತು ತದನಂತರದಲ್ಲಿ ನನ್ನ ಹೆಸರಿಗೆ ಬಂತು . ಸಾಕ್ಷಿ ಪುನಃ ಸದ್ರಿ ಆಸ್ತಿ ಮೊದಲಿಗೆ ವಾಸುದೇವ ಅಜ್ಜಣ್ಣ ಹಾಗೂ ಕೃಷ್ಣ ಅಜ್ಜಣ್ಣ ನಾಯ್ಕ ರಿಗೆ ಇತ್ತು . ವಾಸುದೇವ ಅಜ್ಜಣ್ಣ ಇದ್ದದ್ದು ನಂತರದಲ್ಲಿ ದಯಾನಂದ ಕೃಷ್ಣ ನಾಯ್ಕ ಹೆಸರಿಗೆ ಆಯಿತು . ಸದ್ರಿ ಆಸ್ತಿಗಳು ಮೊದಲಿಗೆ ಅಜ್ಜಣ್ಣ ಖೇಮು ನಾಯ್ಕ ರವರ ಹಸೆರಿಗೆ ಇದ್ದು ಅವರ ನಂತರದಲ್ಲಿ ಪುರುಪೊತ್ತಮ ಅಜ್ಜಣ್ಣ ನಾಯ್ಕ ಅವಿಬಕ್ತ ಕುಟುಂಬದ ಮಾನ್ಯೆಜರ ನಾತೆಯಿಂದ ಬಂದಿತು . ಆತನ ಮರಣಾನಂತರ ಕೃಷ್ಣ ಅಜ್ಜಣ್ಣ ಹಾಗೂ ವಾಸುದೇವ ಅಜ್ಜಣ್ಣ ಹೆಸರಿಗೆ ಬಂದಿತು . ಆ ಜಮೀನನ್ನು ಈಗ ಪಾಲು ಮಾಡಿ ಕೊಂಡಿರುತ್ತಿರಾ ಎಂದರೆ ಅದನ್ನು ಪಾಲು ಮಾಡಿಕೊಂಡಿಲ್ಲ . ಅದು ಸಾಮೂಹಿಕವಾಗಿ ಇರುತ್ತದೆ .

ಅದರಲ್ಲಿ ಬಾಸ್ಕರ , ಕಾಶಿನಾಥ ,ನನ್ನ ಮನೆ , ಮಧುಕರ ಮತ್ತು ಸೀತಾಬಾಯಿ ಮನೆ ಇರುತ್ತದೆ . ಸೀತಾ ಬಾಯಿ ಎಂದರೆ ರಾಮಚಂದ್ರನ ಹೆಂಡತಿ ಹಾಗೂ ಪುರುಷೊತ್ತಮ ನ ಸೊಸೆ ಎಂದರೆ ಸರಿ . ನಿಮ್ಮ ತಿಳುವಳಿಕೆ ಪ್ರಕಾರ ಅಜ್ಜಣ್ಣನಿಗೆ ಸೇರಿದ ಆಸ್ತಿಗಳು ಅವರ ಮಕ್ಕಳಲ್ಲಿ ಇದುವರೆಗೂ ನೊಂದಾಯಿತ ಅಥವಾ ನ್ಯಾಯಾಲಯದ ಮುಖಾಂತರ ಪಾಲು ಆಗಿರುತ್ತದೆಯಾ ಎಂದರೆ ಇಲ್ಲ .ದಾವಾಸ್ತಿಗಳನ್ನು ನೀವು ಸ್ವತಃ ಖರೀದಿ ಮಾಡಿದ್ದಾಗಲಿ ಅಥವಾ ನಿಮಗೆ ದಾನಕ್ಕೆ ಬಂದಿದ್ದಾಗಲಿ ಇರುವುದಿಲ್ಲ ಎಂದರೆ ಸರಿ . ಅವರ್ಸಾ ದಲ್ಲಿರುವ ಅಸ್ತಿಯು ಬಾಗಾಯತ ಆಸ್ತಿಯಾಗಿದ್ದು ಸಕಲಬೇಣ ಯಲ್ಲಿರುವ ಆಸ್ತಿ ಗದ್ದೆ ಎಂದರೆ ಸರಿ . ಸಕಲಬೇಣದಲ್ಲಿರುವ ಗದ್ದೆ ಯು ನಮ್ಮ ಮನೆಯಿಂದ 4 ಕಿ ಮೀ ದೂರದಲ್ಲಿ ಇರುತ್ತದೆ .

6. ಸಕಲಬೇಣದಲ್ಲಿರುವ ಆಸ್ತಿಯಲ್ಲಿ ಎಷ್ಟು ಗುಂಟೆ ಜಾಗವನ್ನು ನೀವು ಸ್ವತಃ ಮಾರಾಟ ಮಾಡಿರುತ್ತೀರಿ ಎಂದರೆ 1 ಎಕರೆ 7 ಗುಂಟೆ ಜಾಗ ನಾನು ಮಾರಾಟ ಮಾಡಿರುತ್ತೇನೆ .ಈಗ ಸಕಲಬೇಣದಲ್ಲಿರುವ ಜಮೀನಿನಲ್ಲಿ ಮಾರಾಟ ಮಾಡದೆ ಎಷ್ಟು ಆಸ್ತಿ ಇರುತ್ತದೆ ಎಂದರೆ 29,12,26,16 ಗುಂಟೆಗಳನ್ನು ಮಾರಾಟ ಮಾಡಿರುವುದಿಲ್ಲ . ಈ ಜಮೀನುಗಳನ್ನು ನೀವು ಮಾರಾಟ ಮಾಡಬೇಕೆಂದು ಇರುತ್ತಿರಾ ಎಂದರೆ ಹೌದು . ದಾನ ಮಾಡುತ್ತೇನೆ ಎಂದು ಬರೆದು ಕೊಟ್ಟಿರುವುದಿಲ್ಲ . ಸರ್ವೆ ಇಲಾಖೆಯವರಿಗೆ ಅರ್ಜಿ ಕೊಟ್ಟು ದಾನಕ್ಕೆ ಕೊಡುತ್ತೇನೆ ಆ ಬಗ್ಗೆ ಸರ್ವೆ ಯಾಗಬೇಕು ಎಂದು ಹೇಳಲಿಲ್ಲವಾಗ ನಾನು ದಾನಕ್ಕೆ ಕೊಟ್ಟಿಲ್ಲ . ಸರ್ವೆ ಹಾಕಬೇಕಾದರೆ ದಾನಕ್ಕೆ ಎಂದು ಅವರೆ ಬರೆಸಿಕೊಟ್ಟದ್ದು ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ ಸರ್ವೆ ಗೆ ಬಂದಾಗ ಈ ದಾನದ ವಿಚಾರ ಗೊತ್ತಾಯಿತು ಅದರ ಬಗ್ಗೆ ನನಗೆ ಗೊತ್ತಿಲ್ಲ . ಆ ನಂತರದಲ್ಲಿ ನಾನು ದಾನ ವನ್ನು ರದ್ದು ಮಾಡಬೇಕೆಂದು ಅರ್ಜಿ ಕೊಟ್ಟು ರದ್ದು ಮಾಡಿಕೊಂಡಿರುತ್ತೇನೆ

7. .ನಾನು ಸರ್ವೆ ಅರ್ಜಿ ಕೊಟ್ಟ ಬಗ್ಗೆ ನ್ಯಾಯಾಲಯದಲ್ಲಿ ದಾಖಲಾತಿ ಹಾಜರ ಪಡಿಸಿರುತ್ತೇನೆ . ಅದು ತಪ್ಪಾಗಿ ದಾನ ಎಂದು ಬರೆದಿದ್ದು ಅದು ಕ್ರಯ ವಾಗಬೇಕಿತ್ತು ಎಂದು ಅರ್ಜಿ ಕೊಟ್ಟಿರುತ್ತೀರಾ ಎಂದರೆ ಇಲ್ಲ . ನನ್ನ ಜಮೀನನ್ನು ಕಸಿದು ಕೊಳ್ಳಬೇಕು ಎಂದು ವಾದಿ ಮತ್ತು 6 ರಿಂದ 9 ನೇ ಪ್ರತಿವಾದಿಯರು ಈ ದಾನಪತ್ರದ ನಾಟಕ ವಾಡುತ್ತಿದ್ದಾರೆ ಎಂದು ನ್ಯಾಯಾಲಯದಲ್ಲಾಗಲಿ ಅಥವಾ ಪೋಲಿಸ ಠಾಣೆಯಲ್ಲಾಗಲಿ ಅದರ ವಿರುದ್ಧ ಕ್ರಮ ತೆಗೆದುಕೊಂಡಿರುತ್ತಿರಾ ಎಂದರೆ ಇಲ್ಲ .

8. ಸಕಲಬೇಣದಲ್ಲಿರುವ ಉಳಿದ ಜಮೀನನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಯಾರು ಮಾಡುತ್ತಿಲ್ಲ ಅದು ಹಾಗೆ ಬಿದ್ದಿರುತ್ತದೆ . ದಾವೆ ಯಾದ ಮೇಲೆ ಅಥವಾ ದಾವೆ ಆಗುವ ಪೂರ್ವದಲ್ಲಿ ಹಾಗೆ ಬಿದ್ದಿರುತ್ತದೆಯಾ ಎಂದರೆ ದಾವೆ ಹಾಕುವ ಪೂರ್ವದಲ್ಲಿ ಹಾಗೆ ಬಿದ್ದಿರುತ್ತದೆ .ನೀವು ಮತ್ತು 1 ರಿಂದ 5 ನೇ ಪ್ರತಿವಾದಿ ಸೇರಿ ಮಾರಾಟ ಮಾಡಿದ ಜಮೀನು ಎಂದು ಪ್ರಶ್ನೆ ಮುಗಿಯುವ ಅಷ್ಟರಲ್ಲಿಯೇ ಅವರೆಲ್ಲಾ ಸೇರಿ ಕೊಂಡು ಮಾರಾಟ ಮಾಡಿಲ್ಲ ನಾನು ಒಬ್ಬನೆ ಆ ಜಮೀನನ್ನು ಮಾರಾಟ ಮಾಡಿದ್ದು ಎಂದು ನುಡಿಯುತ್ತಾರೆ . ಅವರ್ಸಾ ದಲ್ಲಿರುವ ಜಾಗದಲ್ಲಿ ಹೇಗೆ ಎಲ್ಲರೂ ಮನೆ ಕಟ್ಟಿ ಕೊಂಡು ಇರುತ್ತಾರೆ ಅದೇ ರೀತಿಯಾಗಿ ಸಕಲಬೇಣದಲ್ಲಿರುವ ಜಾಗದಲ್ಲಿ ಪುರುಷೊತ್ತಮನ ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಇಲ್ಲ. ಸಕಲಬೇಣದಲ್ಲಿರುವ ಜಮಿನನ್ನು ಪುರುಷೊತ್ತಮನ ಮಕ್ಕಳು ಎನೂ ಸಾಗುವಳಿ ಮಾಡುತ್ತಿದ್ದಾರೆ ಆ ಜಮೀನನ್ನು ಇದುವರೆಗೂ ಯಾರು ಕೂಡ ಮಾರಾಟ ಮಾಡಿಲ್ಲ ಎಂದರೆ ಸರಿ . ಆ ಜಮೀನು ಹಾಗೆ ಇರುತ್ತದೆ . ದಾವೆಯಲ್ಲಿ ನೀವು ಮಾರಾಟ ಮಾಡಿದ 1 ಎಕರೆ 6 ಗುಂಟೆ ಜಮೀನನ್ನು ಕಾಣಿಸಿಲ್ಲ ಎಂದರೆ ಸರಿ . ನೀವು ಜಮೀನನ್ನು ಮಾರಾಟ ಮಾಡುವಾಗ ಮ್ಯಾಪ ಮಾಡಿಕೊಂಡು ಮಾರಾಟ ಮಾಡಿದ್ದಾ ಅಥವಾ ಹಾಗೆ ಮಾರಾಟ ಮಾಡಿದ್ದಾ ಎಂದರೆ ಮ್ಯಾಪ ಮಾಡಿಕೊಂಡೆ ಮಾರಾಟ ಮಾಡಿರುತ್ತೆನೆ .ಅದರಲ್ಲಿ ಬಂದ ಹಣವನ್ನು ನಾನು ಯಾರಿಗೂ ಕೊಟ್ಟಿಲ್ಲ ನನ್ನ ಜಮೀನನ್ನು ನಾನು ಮಾರಾಟ ಮಾಡಿದೆ ಬಂದ ಹಣವನ್ನು ನಾನು ಇಟ್ಟು ಕೊಂಡೆ . ಆ ಜಮೀನನ್ನು ಮಾರಾಟ ಮಾಡುವಾಗ ನನ್ನ ಪಾಲಿನ ಜಮೀನನ್ನು ನಾನು ಮಾರಾಟ ಮಾಡಿ ಕೊಳ್ಳುತ್ತೇನೆ . ನಿಮ್ಮ ಪಾಲಿನ ಜಮೀನನ್ನು ನಿಮಗೆ ಕೊಡುತ್ತೇನೆ ಎಂದು ಆ ದಾನ ಪತ್ರ ವನ್ನು ಮಾಡಿದ್ದು ಎಂದರೆ ಸುಳ್ಳು . ಸಕಲಬೇಣ ದಲ್ಲಿರುವ ಆಸ್ತಿ ಕೂಡ ಕೃಷ್ಣನಿಗೆ , ವಾಸುದೇವ ನಿಗೆ , ಪುರುಷೂತ್ತಮನಿಗೆ 1/3 ಹಕ್ಕು ಇರುತ್ತದೆ ಎಂದರೆ ಸುಳ್ಳು . ಅವರ್ಸಾ ಮತ್ತು ಸಕಲಬೇಣ ದಲ್ಲಿರುವ ಆಸ್ತಿಗಳು ಅಜ್ಜಣ್ಣ ಖೇಮು ನಾಯ್ಕ ರವರಿಂದ ಬಂದ ಆಸ್ತಿಗಳು ಎಂದರೆ ಅವುಗಳು ನನ್ನ ತಂದೆ ಹೆಸರಿಗೆ ಟ್ರೈಬ್ಯುನಲ್ ಮುಖಾಂತರ ಬಂದಿರುತ್ತದೆ . ನಿಮ್ಮ ತಂದೆಯು ಅರ್ಜಿಯನ್ನು ಹಾಕುವಾಗ ನಿಮ್ಮ ತಂದೆಯ ಸಹೋದರರಲ್ಲಿ ಮತ್ತು ನಿಮ್ಮ ತಂದೆಯಲ್ಲಿ ಪಾಲು ಆಗಿದ್ದು ಇರುತ್ತದೆಯಾ ಎಂದರೆ ಆ ಅರ್ಜಿ ನನ್ನ ತಾಯಿ ಹಾಕಿದ್ದು . ಆವರ್ಸಾ ಮತ್ತು ಸಕಲಬೇಣದಲ್ಲಿರುವ ಜಮೀನು ವಾರಸಾ ನಾತೆಯಿಂದ ಬಂದ ಆಸ್ತಿಗಳು ಎಂದರೆ ಅಲ್ಲ ಅವು ನನ್ನ ತಂದೆಗೆ

ಒಡೆಯನಿಂದ ಬಂದ ಆಸ್ತಿಗಳು ಆಗಿರುತ್ತದೆ . ಪುರುಷೋತ್ತಮನ ಮಕ್ಕಳು ಹಾಗೂ ವಾಸುದೇವನ ಮಕ್ಕಳು ಅವರೆಲ್ಲಾ ರೈತಾಪಿ ಮಾಡಿ ಕೊಂಡು ಜೀವನ ಮಾಡಬಹುದಾಗಿತ್ತು ಎಂದರೆ ಎಲ್ಲಿ ರೈತಾಪಿ ಮಾಡುತ್ತಿದ್ದರೊ ನಾನು ನೋಡಲೂ ಹೋಗಿಲ್ಲ . ಸಕಲಬೇಣ ದಲ್ಲಿರುವ ಆಸ್ತಿಯನ್ನು ನಿಮ್ಮ ಅಜ್ಜನ 3 ಜನ ಮಕ್ಕಳು ರೈತ ನಾತೆಯಿಂದ ಕೂಡಿ ಕೊಂಡು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸುಳ್ಳು . ನನ್ನ ತಂದೆ ತೀರಿ ಕೊಂಡ ನಂತರ ವಾರಸಾ ನಾತೆಯಿಂದ ಆಸ್ತಿಯು ನನ್ನ ತಾಯಿ ಹೆಸರಿಗೆ ಬಂದಿರುತ್ತದೆ . ಭೂ ನ್ಯಾಯ ಮಂಡಳಿಯು ಯಾರ ಹೆಸರಿನಲ್ಲಿ ಜಮೀನು ಇರುತ್ತದೆಯೊ ಅವರಿಗೆ ಪಟ್ಟಾ ಕೊಟ್ಟಿರುತ್ತಾರೆ ಎಂದರೆ ಇಲ್ಲ .ಕುಟುಂಬ ಅಸ್ತಿ ಲಪಟಾಯಿಸಬೇಕು ಎಂಬ ಉದ್ದೇಶದಿಂದ ಆ ಆಸ್ತಿಯು tribunal ದಿಂದ ಬಂದಿದ್ದು ಎಂದರೆ ಸರಿಯಲ್ಲ . ದಾವಾಸ್ತಿಗಳಲ್ಲಿ ಅಂದರೆ ಸಕಲಬೇಣ ದಲ್ಲಿರುವ ಆಸ್ತಿಯು ವಾದಿ ಹಾಗೂ 6 ರಿಂದ 9 ನೆ ಪ್ರತಿವಾದಿಗಳು ಸೇರಿ ಸಾಗುವಳಿ ಮಾಡುತ್ತಿರುವುದರಿಂದ ಅದು ಅವರ ಪಾಲಿನ ಹಕ್ಕಿನ ಜಮಿನು ಎಂದರೆ ಸರಿಯಲ್ಲ . ಆ ಜಮೀನನ್ನು ವಾದಿಯವರು ಹಾಗೂ 6 ರಿಂದ 9 ನೇ ಪ್ರತಿವಾದಿಯರು ನಿಮಗೆ ಮಾರಾಟ ಮಾಡಲು ಕೊಡಲಿಲ್ಲ ನೀವು ಅವರಿಗೆ ವರ್ಗಾವಣೆ ಮಾಡಿ ಕೊಡುತ್ತೇನೆ ಎಂದು ಹೇಳಿ ಇದುವರೆಗೂ ವರ್ಗಾವಣೆ ಮಾಡಿ ಕೊಡದೆ ಇರುವುದರಿಂದ ಈ ದಾವೆ ಹಾಕುವ ಪ್ರಸಂಗ ಬಂತು ಎಂದರೆ ಸುಳ್ಳು .ದಾವೆಯಲ್ಲಿ ಕಾಣಿಸಿದ ಆಸ್ತಿಯು ವಾದಿಯರದ್ದು ಹಾಗೂ 6 ರಿಂದ 9 ನೇ ಪ್ರತಿವಾದಿಗೆ ವಾರಸಾ ನಾತೆಯಿಂದ ಬಂದ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ .ದಾವಾಸ್ತಿಯನ್ನು ವಾದಿಯರಿಗೆ ಬಿಟ್ಟು ಕೊಡಬೇಕು ಎಂಬ ಕಾರಣದಿಂದ ನೀವು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ .

( ಈ ಹಂತದಲ್ಲಿ 6 ಮತ್ತು 8 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.